ತುಮಕೂರು ಡಿಸ್ಟ್ರಿಕ್ಟು.

ಇಸ್ತೆಹಾರ್ ಗೊಪ್ಪ್ಯಾರೆ.

ಇದರಿಂದ ತಿಳಿಯಪಡಿಸುವದೇನೆಂದರೆ :—ತುಮಕೂರು ತಾಲ್ಲೂಕು ಕೋಳಾಲದ ಸಮ್ಮತು ಕರೇಕಲ್ಲು ಜೋಡಿಗ್ರಾಮವು 1907ನೆ ಇಸವಿ 16ನೆ ಏಪ್ರೆಲ್ ತಾರೀಖಿನಲ್ಲಿ ಕರೇಕಲ್ಲು ಗ್ರಾಮದಲ್ಲಿ ಕಂದಾಯದ ಬಾಕೀಗಾಗಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ವಿಶೇಷ ಸಂಗತಿಗಳಿಗೆ 1907ನೆ ಇಸವಿ ಮಾರ್ಚಿ 14ನೆ ಮತ್ತುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 72—73ನೆ ಪುಟಗಳಲ್ಲಿ ನೋಡಿ.

ಪ್ರಸಿದ್ಧ-ಪತ್ರಿಕೆ.

1. 1906ನೆ ಇಸವಿ VIIನೆ ನಂಬರ್ದ ಮೈಸೂರು ಸೀಮೆಯ ಮ್ಯುನಿಸಿಪಲ್ ರಗ್ಯುಲೇಷನ್ನಿನ 8ನೆ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—

ಮೇಲ್ಕಂಡ ರಗ್ಯುಲೇಷನಿನ 7ನೆ ಸೆಕ್ಷನ್ನಿಗೆ ಅನುಸಾರವಾಗಿ ತುಮಕೂರು ಟವ್ನ ಮತ್ತು ಅದರ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಹಾಲಿ ಇರತಕ್ಕ ಈ ಕೆಳಗೆ ನಮೂದಿಸಿರುವ ಪಾಳ್ಯಗಳು ಸೇರಿಸಿ "ಕಾಯಂ ಮ್ಯುನಿಸಿಪಾಲಿಟಿ" ಯನ್ನಾಗಿ ಮಾಡಲ್ಪಡುತ್ತೆ.

ಇದಕ್ಕೆ ಏನಾದರು ಆಕ್ಷೇಪಣೆಗಳು ಇದ್ದಲ್ಲಿ ಅಂಥಾ ಆಕ್ಷೇಪಣೆಗಳನ್ನು ಸಾಕಾವ ಕಾರಣಗಳನ್ನಿಸಿ ಈ ಪ್ರಸಿದ್ಧಪತ್ರಿಕೆಯು ತಾರೀಖು ಲಾಗಾಯ್ತು ಎರಡು ತಿಂಗಳ ಒಳಗಾಗಿ ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರರಿಗೆ ಲಿಖಿತಮೂಲಕವಾಗಿ ಕಳುಹಿಸತಕ್ಕದ್ದಿರುತ್ತೆ.

ತುಮಕೂರು ಟವ್ನ ಅದರ ಎರಡು ಎಕ್ಸ್‌ಟೆಂಷನ್‌ಗಳು ಮತ್ತು ಈ ಕೆಳಗೆ ಕಂಡ ಹೆಸರುಳ್ಳ ಪಾಳ್ಯಗಳು.

(1) ಎಕನಾತಮ್ಮನ ಪಾಳ್ಯ
(2) ಹನುಮನಾಯ್ಕನ ಪಾಳ್ಯ.
(3) ಏನವಂಣನ ಪಾಳ್ಯ.
(4) ಸಾಡೇಸಾಹೇರ ಪಾಳ್ಯ.
(5) ಅರ್ಜಿ ರಂಗಂಣನ ಪಾಳ್ಯ.
(6) ಅರಳಿಮರದ ಪಾಳ್ಯ.
(7) ಹೊನ್ನನಾಯಕನ ಪಾಳ್ಯ.
(8) ಅಮಿನುದ್ದೀನಸಾಬರ ಪಾಳ್ಯ.
(9) ಬಾಳೇಗೌಡನ ಪಾಳ್ಯ.
(10) ಕಂಬಾಳಿಯ್ಯನಪಾಳ್ಯ.
(11) ಭೀಮನಾಯಕನಪಾಳ್ಯ.
(12) ಕುರಿಪಾಳ್ಯ.
(13) ಗುಡಿಯಪ್ಪನ ಪಾಳ್ಯ.
(14) ಹೊಲೇರಹಟ್ಟಿ.
(15) ಗರಡಿ ಚಿಕ್ಕಂಣನಪಾಳ್ಯ.
(16) ಟಾನರಿ.
(17) ಮಾದಿಗರಹಟ್ಟಿ.

ಎಂ. ಶ್ರೀನಿವಾಸಮೂರ್ತಿ,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 19ನೆ ಮಾರ್ಚಿ 1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ. (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮುಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ಏಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯ್ತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಲುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ, ಖರ್ಚುಗಳು ಸೇರಿಸಿ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

6. ಡೆಪ್ಯುಟಿ ಕಮಿಶ್ನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮ್ಮಾದ್ದಾಗಿರುವದಿಲ್ಲವು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ಡೆಪ್ಯುಟಿ ಕಮಿಶನರವರು ಖಾಯಂಮಾಡಿದ ಕೂಡ್ಲೆ ಗ್ರಾಮವು ಆತನ ಸುಧರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಶನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ಲುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ಡೆಪ್ಯುಟಿ ಕಮಿಶನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆಯ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಇರುತ್ತೆ.

ಹೋಬಳಿ	ತಾಲ್ಲೂಕು	ಗ್ರಾಮ.	ಜೋಡೀದಾರರ ಹೆಸರು	ಅಂದಾಜು ಬೀಜವರಿ.	ಅಂದಾಜು ಹಣ್ಣು ಗಳ ಯಾ ಪೀರೀಜ್	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ಯಾ ಪೆರೂಪು	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ನ್ಯೆರೆ.
ಹಾಸನ	ಅರಕಲಗೂಡು ಸಬ್ ತಾಲ್ಲೂಕು	ಜೋಡಿ ನಳಿಲಹಳ್ಳಿ	ವೆಂಕಟಸುಬ್ಬಯ್ಯರ ಮಗ್ಗೆರೆ 6 ಜನ	ಎ.. ಗು.	ರೂ. ಆ.	ರೂ. ಆ. ಪೈ.	ರೂ. ಆ. ಪೈ.	1907ನೇ ಇಸವಿ ಜೂನ್ ತಾ॥ 18ನೆ ಮಂಗಳವಾರ ದಿವಸ ದಿವಸ 11 ಗಂಟೆ ಬಾ॥ ಕುಂದೂರು ಕ್ಯಾಂಪ್‌ನಲ್ಲಿ ಜಿಲ್ಲಾ ಕಲೆಕ್ಟರ್ ಸಾಹೇಬರವರು ಹರಾಜು ಮಾಡಿಸುವರು.
			ಪರಂಪೋಕು	44 29	0 12			
			ಖುಷ್ಕಿ ...	218 12	82 4			
			ತರಿ ...	20 4	57 0	131 0 0	ವಿಶ್ವಾವಸು	
			ತೋಟ	1 12	5 0	ಸೆಸ್ಸು 9 1 0	ಸಾಲಾಖ್ಯೆರು ವರಿಗೆ	
			ಜುಮ್ಲಾ ..	284 17	145 0	140 1 0	503 3 2	

ಚಾತಪ್ಪರ್ಶ.

ಪೂರ್ವಕ್ಕೆ —ನದಿ.
ಪಶ್ಚಿಮಕ್ಕೆ —ಮಾಳೇನಹಳ್ಳಿ ಕಾವಲು ಗಡಿ.
ದಕ್ಷಿಣಕ್ಕೆ —ಕಾಕನಹಳ್ಳಿ ಗಡಿ.
ಉತ್ತರಕ್ಕೆ —ಹೊಳ್ಳಿ ಮಾರಗೋಡನಹಳ್ಳಿ ಗಡಿ.

ನೋಟೀಸು ಫೀಜು ಬಡ್ಡಿ ವಗೈರೆ.

ಷರಾ—ಜೋಡೀದಾರರುಗಳಿಂದಲಾಗಲಿ ಯಾ ಖಾಯಂಗುತ್ತಾದಾರರುಗಳಿಂದ ಆಗಲಿ ಬಾಧ್ಯತೆ ಮೂಲಕ ಇವರುಗಳಿಗೆ ಹಿಂದೆಯಿದ್ದವರಿಂದಲಾಗಲಿ ಉಂಟು ಮಾಡಲ್ಪಟ್ಟ ತಮಾಂ ಹಿಡುವಳಿಗಾಗಲಿ ದೇಣಿಗಳಿಗೆ ಆಗಲಿ ಮತ್ತು ಹಕ್ಕುಗಳಿಗೆ ಆಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರಿ ಹರಾಜು ಒಳಪಟ್ಟು ಇರುವದಿಲ್ಲ.

ತಾರೀಖು 19ನೆ ಮಾರ್ಚ್ 1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡವರಖಾನ್ದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದ ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಶನರವರು ತಮ್ಮ ಯಖ್ತ್ಯಾರ್‌ನೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಸರ್ತಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಉಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯೂ ಇತರ ಖರ್ಚುಗಳು ಸೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕೂಫ್ ಮಾಡಲ್ಪಡತಕ್ಕದ್ದು.

6. ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಜಾಯ್ತುಮಾದ್ದಾಗಿರುವದಿಲ್ಲವು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜನ್ನು ಡೆಪ್ಯುಟಿ ಕಮಿಷನರವರು ಜಾಯಂ ಮಾಡಿದ ಕೂಡಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದ್ದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರು ಮಾಡೋಕಾದ ಬಂದು, ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲೀ ಇರುವ ಗಲ್ಲತ್ತು ಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು ಸದರೀ ಹರಾಜಿನಿಂದ ಲುಕ್ಸಾನಪಟ್ಟುಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿನಗಳೊಳಗಾಗಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲನಲ್ಲಿ ಆಗುವ ಆಜ್ಞೆಗಳು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ತಿಪ್ಪುಗಳು	ತಾಲ್ಲೂಕು	ಹೋಬಳಿ	ಗ್ರಾಮ	ಜೋಡೀದಾರರ ಹೆಸರು	ಅಂದಾಜು ಬೀಜವರಿ	ಅಂದಾಜು ಪಟ್ಟುವ ಜಿಲ್ಲಾ ಪರಿಷತ್ತು ಯಾ ತಾಲ್ಲೂಕು ಬೋರ್ಡು	ಸಾಲಿಯಾನಾ ಸರಾಸರಿ ಕಂದಾಯ ಕ್ಕೆ ಕೊಡಬೇಕಾದ ಕ್ಯೆಪ್ಪರಿಷ್ಟ	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಪಾಳ್ಯದ ಗಡಿ	ಮೈಸೂರು ತಾಲ್ಲೂಕು	ಹೊಸೂರು ಹೋಬಳಿ	ಜೋಡಿ ಹೊನ್ನಿಗನಹಳ್ಳಿ	ರಾಷ್ಟಿನೇಂಡ್ರಾಜಾರ್ ವೆಂಕಟರಮಣಯ್ಯನವರ ಮಗ ಜನಾರ್ದನಯ್ಯನವರು.	ಎಗು ಪರಂಪೋಕು 697 16 ಖುಷ್ಕಿ 141 27 ತರಿ 155 36 ಬಾಗಾಯತು 0 6 ಜುಮ್ಮಾ 995 5	ರೂ. ಆ. 11 0 75 4 653 12 0 4 740 4	ರೂ. 418	ರೂ. ಪೈ. ಜಿಶ್ಯಾವಸು ಸಾಲ್ ಆಖ್ಯೆರ್ ವರಗೆ 433 9 3 ಮತ್ತು ಬಡ್ಡಿ ವಗೈರೆ.	1907ನೆ ಇಸವಿ ಮೇ ಮಾಹೆ 20ನೆ ತಾರೀಖು ಮಾ ಸೋಮವಾರ ದಿವಸ 11 ಘಂಟೆ ಲಾಗಾಯಿತು ಮಾ ಹೊತ್ತಿನ ವರ್ಕಾಂನಲ್ಲಿ ಬಿಸ್ಸುಕ್ಕು ಬಿಡ್ಡುದಾರರ ಎದುರಿಗೆ ಡೆಪ್ಯುಟಿ ಕಮಿಷನರವರು ಸದರಿ ಹರಾಜನ್ನು ಕಮಿಷನರವರಿಂದ ನೇಮಕವಾಗಿರುವ ಫಿಸರು ಹರಾಜು ಮಾಡುತ್ತಾರೆ.

ಚತುರ್ಹದ್ದು.

ಪೂರ್ವಕ್ಕೆ — ಪಾಳ್ಯದ ಗಡಿ.
ಪಶ್ಚಿಮಕ್ಕೆ — ಮಂಜರಾಬಾದ್ ತಾಲ್ಲೂಕು ಚಿಕ್ಕ ನಾಯಕನಹಳ್ಳಿ ಗಡಿ.
ದಕ್ಷಿಣಕ್ಕೆ — ಹಿಗಳೂರು ಗಡಿ.
ಉತ್ತರಕ್ಕೆ — ಬೆಳ್ಳೂರು ಗಡಿ.

ಷರಾ — ಜೋಡೀದಾರರುಗಳಿಂದಲಾಗಲಿ ಯಾ ಕಾಯಂಗುತ್ತಿದಾರರುಗಳಿಂದ ಆಗಲಿ ಬಾಧ್ಯತೆ ವಮೂಲಕ ಇವರುಗಳಿಗೆ ಹಿಂದೆಯಿದ್ದವರಿಂದಾಗಲಿ ಉಂಟುಮಾಡಲ್ಪಟ್ಟ ತಮಾರಿ ಹಿಡುವಳಿಗಾಗಲಿ, ದೇಣಿಗಳಿಗೆ ಆಗಲಿ ಮತ್ತು ಹಕ್ಕುಗಳಿಗೆ ಆಗಲಿ, ಅಥವಾ ಮೆಷ್ಯಾವ ಸಂಬಂಧಗಳಿಗಾಗಲಿ ಸದರಿ ಹರಾಜು ವಳಪಟ್ಟಿರುವದಿಲ್ಲ.

ಟಿ. ಧರ್ಮರಾಜ ಜೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸ್ಮಾಲ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸನ್ 1906—07ನೆ ಇಸವಿ ವಿಸ್ ಅರ್ಜೀ ನಂಬರು 207.

ಅರ್ಜೀದಾರ್ ದೊಡ್ಡಬಳ್ಳಾಪುರದಲ್ಲಿರುವ ಸಿದ್ದಪ್ಪನ ಹೆಂಡತಿ ಸೂರಮ್ಮ, ಮೈನಾದ ದೊಡ್ಡಬಳ್ಳಾಪುರದ ಸ್ಥಳಿದ ಸಿದ್ದರಂಗಪ್ಪನ ಮಗ ಸಿದ್ದಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಸಿದ್ದಪ್ಪನಿಗೆ ತಂದೆಯು ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ದೊಡ್ಡಬಳ್ಳಾಪುರದ ಸ್ಥಳಿದ ಸೂರಮ್ಮನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಫಿಕೇಟ್ ಬ್ಯೆ ಅರ್ಜಿ ಕೊಟ್ಟು ಇರುತ್ತಾಳೆ. ಸದರೀ ಅರ್ಜಿ ಹಿಯರಿಂಗ್ ಬ್ಯೆಸ್ ಸನ್ 1907ನೆ ಇಸವಿ ಮೇ ತಾರೀಖು 31ನೆ ಶುಕ್ರವಾರ ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣವಾಗಿದೆ.

ಸನ್ 1907ನೆ ಇಸವಿ ಮಾರ್ಚಿ 19ನೆ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ಡಸ್ತಖತ್ತಿನಲ್ಲಿ ಕೊಡೋಣವಾಗಿದೆ.

ಜೆ. ಪೆಟ್. ಭಾಭ್ಭಾ,
ಸಬ್ ಜಡ್ಜ್.

ಬೆಂಗಳೂರು ಡಿವೀಜ್ ಸೆಂಟ್ರಲ್ ರಿಕಾರ್ಡ್ಸ್ ಆಫೀಸು.

ರಿಕಾರ್ಡ್‌ಗಳನ್ನು ನಾಶಪಡಿಸುವಿಕೆ.

1907ನೆ ಇಸವಿ ಮಾರ್ಚ್ 11.

ಮೈಸೂರು ಚೀಫ್ ಕೋರ್ಟ್ 1905ನೆ ಇಸವಿ ಸೆಪ್ಟಂಬರು 26ನೆ ಮರುಂ 122ನೆ ನಂಬರು ರೂಲ್ಸು ಆಫ್ ಪ್ರಾಕ್ಟೀ ಅನುಸರಿಸಿ ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—